**ಕರ್ನಾಟಕ ಸರ್ಕಾರ**

ಸಂಖ್ಯೆ: ಎನರ್ಜಿ 375 ವಿಎಸ್‌ಸಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:15-05-2021

**ಇವರಿಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ, ವಿಕಾಸ ಸೌಧ,
ಬೆಂಗಳೂರು.

**ಇವರಿಗೆ:**

ವ್ಯವಸ್ಥಾಪಕ ನಿರ್ದೇಶಕರು,
ಬೆಸ್ಕಾಂ, ಬೆಂಗಳೂರು.

ಮಾನ್ಯರೆ,

ವಿಷಯ: **ಕುಡಿಯುವ ನೀರಿನ ಯೋಜನೆಗಳ ವಿದ್ಯುದೀಕರಣಕ್ಕಾಗಿ ಅಗತ್ಯವಿರುವ ಮೂಲಸೌಕರ್ಯ ರಚನೆಗೆ ತಗಲುವ ವೆಚ್ಚವನ್ನು ಪಾವತಿಸಿಕೊಳ್ಳುವ ಬಗ್ಗೆ**

ಉಲ್ಲೇಖ: ತಮ್ಮ ಪತ್ರ ಸಂಖ್ಯೆ ಬೆವಿಕಂ/ಮು.ಪ್ರ.ವ್ಯ (ಕಾ)/ಉ.ಪ್ರ.ವ್ಯ (ಕಾ-1)/ಸ.ಪ್ರ.ವ್ಯ(ಕಾ-4)/2020-21/01-05 ದಿನಾಂಕ 12.4.2021

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕುಡಿಯುವ ನೀರಿನ ಯೋಜನೆಗಳ ವಿದ್ಯುದೀಕರಣಕ್ಕಾಗಿ ಅಗತ್ಯವಿರುವ ಮೂಲಸೌಕರ್ಯ ರಚನೆಗೆ ತಗಲುವ ವೆಚ್ಚವನ್ನು ಪಾವತಿಸಿಕೊಳ್ಳುವ ಬಗ್ಗೆ ನಿರ್ದೇಶನ ಕೋರಿರುತ್ತೀರಿ. ಈ ಕುರಿತು ಕೆಳಕಂಡಂತೆ ಸ್ಪಷ್ಟೀಕರಣ ನೀಡಲು ನಿರ್ದೇಶಿಸಲ್ಪಟ್ಟಿದ್ದೇನೆ:

ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆಗೆ ತೊಂದರೆಯಾಗದಂತೆ, ಕುಡಿಯುವ ನೀರಿನ ಯೋಜನೆಗಳಿಗೆ ಆದ್ಯತೆ ಮೇಲೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೆಇಆರ್ ಸಿ ರವರ ನಿಯಮಗಳನ್ನು ಪಾಲಿಸಿ ಕ್ರಮ ವಹಿಸುವಂತೆ ಮತ್ತು ವಿಸಕಂಗಳ ಆರ್ಥಿಕ ಹಿತದೃಷ್ಟಿಯಲ್ಲಿ ಬಾಕಿ ಮೊತ್ತವನ್ನು ಕಾಲಕಾಲಕ್ಕೆ ವಸೂಲಾತಿ ಮಾಡಿಕೊಳ್ಳುವುದು ವಿದ್ಯುತ್ ಸರಬರಾಜು ಕಂಪನಿಗಳ ಜವಾಬ್ದಾರಿಯಾಗಿದ್ದು, ಕುಡಿಯುವ ನೀರಿನ ಯೋಜನೆಗಳ ವಿದ್ಯುದೀಕರಣ ಕಾಮಗಾರಿಗಳಿಗೆ ತಗಲುವ ವೆಚ್ಚದಿಂದಲೂ ಸಹ ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಪರಿಸ್ಥಿತಿಯ ಮೇಲೆ ಯಾವುದೇ ರೀತಿಯ ಪರಿಣಾಮ ಬೀರದಂತೆ ಸ್ಥಳೀಯ ಸಂಸ್ಥೆಗಳಿಂದ ಹಣ ವಸೂಲಾತಿ/ಪಾವತಿಸಿಕೊಳ್ಳುವ ಬಗ್ಗೆ ಅಗತ್ಯ ಕ್ರಮ ವಹಿಸುವುದು ಸೂಕ್ತವಾಗಿರುತ್ತದೆ.

ತಮ್ಮ ವಿಶ್ವಾಸಿ

N. mangalagowri 17/5/21

(ಎನ್. ಮಂಗಳಗೌರಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಮೆಮೋ: ಪ್ರವ್ಯ(ತಾ)/ಉಪ್ರವ್ಯ(ತಾ)/ಸಪ್ರವ್ಯ(ತಾ)-1/ಸಿ-2007/2021-22/ /cys-301 ದಿನಾಂಕ: 21 MAY 2021

ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ ಹಾಸನ
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ & ಪಾ ವೃತ್ತ , ಚಾವಿಸನಿನಿ.
3. ಉಪಪ್ರಧಾನ ವ್ಯವಸ್ಥಾಪಕರು (ಎಂ.ಐ.ಎಸ್.). ನಿಗಮ ಕಚೇರಿ, ಚಾವಿಸನಿನಿ, ಮೈಸೂರು ರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
5. ಆಪ್ತ ಸಹಾಯಕರು ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು ನಿರ್ದೇಶಕರು (ತಾಂತ್ರಿಕ)/ ಆಪ್ತ ಸಹಾಯಕರು ಮುಖ್ಯ ಆರ್ಥಿಕ ಅಧಿಕಾರಿ ಇವರ ಗಮನಕ್ಕೆ ಹಾಗೂ ವಿಷಯವನ್ನು ವ್ಯ.ನಿ/ ನಿ.(ತಾ)/ ಮು.ಆ.ಅ ರವರ ಗಮನಕ್ಕೆ ಸಲ್ಲಿಸಲು.

ಮುಖ್ಯ ಕಡತ/ ಕಛೇರಿ ಪ್ರತಿ

21/5/2021

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.